ಅಂಜೇ ಇಲಾಖಾ.

ತಾರೀಖು 15ನೇ ನವಂಬರ್ 1885.

ನಂ. A 17.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್‌ಕ್ಯೂಟ್ ಮೊಕ್ಕಾಮಿನಲ್ಲಿ ಪಾವತೀಬ್ಯೆ ರವಾನಿಸಲ್ಪಡುವ ದರೋಬಸ್ತು ಲೆಟರುಗಳು ವ ಪಾರ್ಸಲ್‌ಗಳ ಮೇಲೆ "ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಕ್ಯಾಂಪಿಗೆ" ಯಂಬದಾಗಿ ಮಾತ್ರ ಮೇಲ್‌ವಿಳಾಸ ಬರಿಯಬೇಕೇಜೊತ್ತು, ಫಲಾನೆ ಅಂಜೆಗೆ ಯಂಬದಾಗಿ ಬರಿಯತಕ್ಕ ಆವಶ್ಯಕವಿಲ್ಲವು.

ಬಿ. ಮುದಗಂಗಯ್ಯ,
ಅಂಜೇ ಬಕ್ಷಿ.

ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಸ್ ೧೮೮೫ನೇ ಇಸವಿ ನವಂಬರ್ ತಾರೀಖು 3ರಲ್ಲು ಡಿಸ್ಟ್ರಿಕ್ಟ್ ಮು ಜಕೂರ್ ಚನ್ನಪಟ್ಟಣದ ಫಿರಕಾ ಮೋಗೇನಹಳ್ಳಿ ಗ್ರಾಮದ ಮಣ್ಣುಗುಡ್ಡೆಯಲ್ಲಿ ಚಿನ್ನದ ೫ ಅರ್ಧವರಹಾ ವುತ್ತು ಚಿನ್ನದ 319 ಹೊಣಗಳು ಇವೆರಡೂ ಕೀರಿ ಸುವಹರು 100—5—4 ರೂಪಾಯಿ ಅಂದಾಜು ಬಾಳುವ ಮೇಲ್ಕಂಡ ನಿಕ್ಷೇಪವು ದೊರಕಿರುತ್ತೆ, ಇದರಮೇಲೆ ಹಕ್ಕು ಬಾಧ್ಯತೆ ಇರತಕ್ಕವರು ಈ ಇಸ್ತಿಹಾರ್ ತಾರೀಖು ಲಾಗಾಯತು 6 ತಿಂಗಳ ಪರಿಗಾಗಿ ಬೆಂಗಳೂರಲ್ಲಿರುವ ನಮ್ಮ ಆಫೀಸ್ ರೂಬರೂ ಖು ದ್ದಾಗಲಿ ಅಥವಾ ಏಜಂಟರ ಮೂಲಕವಾಗಲಿ ಹಾಜರಾಗಿ ತಮ್ಮ ಹಕ್ಕುದಾರಿಯನ್ನ ಸ್ಥಿರಪಡಿಸಿಕೊಳ್ಳತಕ್ಕದ್ದಾಗಿರುತ್ತೆ.

ಬತಾರೀಖು 12ನೇ ನವಂಬರ್ 1885ನೇ ಇಸವಿ ದರಜಾಗಾ ಬೆಂಗಳೂರು.

ಎ. ಜೆಚ್. ಮೆಕ್ಕ್ಯಾಟಯರ್,
ಡೆಪ್ಯೂಟಿ ಕಮ್ಮಿಷನರ್.

ತಾರೀಖು 13ನೇ ನವಂಬರ್ 1885.

ಇದರಿಂದ ತಿಳಿಸುವದೇನಂದರೆ, ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿಯೂ ಡಿಸ್ಟ್ರಿಕ್ಟು ಲಾಕಪ್ಪಿನಲ್ಲಿಯೂ ಖೈದ್ ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಯೆ ಸ್ ೧೮೮೬ನೇ ಇಸವಿ ಜನವರೀ ಗುರ್ತೇ ತಾರೀಖು ಮೊದಲು 1886ನೇ ಡಿಸಂಬರ್ 31ನೇ ತಾರೀಖು ವರಿಗೆ ಎರಡು ದಿನಗಳೂ ಕೀರಿ ಪೇಕಾದ ಆಹಾರ ವಗ್ಯೆರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದ್ ಮಾಡಲ್ಪಟ್ಟ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರು, ಸ್ ೧೮೮೫ನೇ ಇಸವಿ ಡಿಸಂಬರ್ 10ನೇ ತಾರೀಖುವರೆಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲವೆ.

3. "ಸೆಂಟ್ರಲ್ ಜೈಲ್ ಮತ್ತು ಡಿಸ್ಟ್ರಿಕ್ಟು ಲಾಕಪ್ಪಿಗೆ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯೆಂಬದಾಗಿ ದರಖಾಸ್ತುಗಳ ಮೇಲೆ ಬರೆಮ ಕಳುಹಿಸತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರ್ನಸೀ ನೋಟುಗಳ ಮೂಲಕ ಡಿಪಾಜಿಟ್‌ನೀ ಕಳುಹಿಸಲ್ಪಟ್ಟ ಹೊರ್ತು ಯಾ ವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಸೆಂಟ್ರಲ್ ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ, ಮೇಲ್ಕಂಡ ತಾರೀಖಿನೊಳಗೆ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

1	ನೇಟಿವ್ ಕೂಲಿಯವರಾದ	ಖೈದಿಗಳು	A ಕ್ಲಾಸ್.
2	ಡಿಟೋ	ಡಿಟೋ	B ,,
3	ಡಿಟೋ	ಡಿಟೋ ಅಲ್ಪವಾಯಿದೆಯವರು	C ಕ್ಲಾಸ್
4	ನೇಟಿವ್ ಕೂಲೀ ಮಾಡದ ಗಂಡಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು,		D ಕ್ಲಾಸ್
5	ಹುಡುಗರಾದ	ಖೈದೀರು	E ,,
6	ಯೂರೋಪಿಯರ್‌ಗಳು ವ ಈಸ್ಟ್ ಇಂಡಿಯರ್‌ಗಳು		

ಸ್ರ 1886ನೇ ಇಸವಿಯಲ್ಲಿ ರೋಜೀನಾ ಸುಮಾರು 750 ಮಂದಿ ಖೈದೀರು ಇರಬಹುದಾಗಿ ಅಂದಾಜು ಇದ್ದೆ.

7. ದರಖಾಸ್ತು ಮಾಡಲ್ಪಟ್ಟ ದರಗಳು ಇದಕ್ಕೆ ಲಗತ್ತಾದ ಆಹಾರ ಜಿನೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ ಆಸ್ಪತ್ರಿ ಆಹಾರ ಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಪ್ಯವಾಗತಕ್ಕ ಪದಾರ್ಥಗಳು, ಹೊರ ಕಾಮಗಾರಿ ಕೈದಿಗಳಿಗೆ ಜಾಸ್ತಿ ಭತ್ತಾ, ದೀಪದಯಂತ್ರೆ, ಕೆರೋಸಿರ್ಯ ಯಂತ್ರೆ, ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ, ಅಡಿಗೆ ಮಾಡುವ ಬಗ್ಯೆ ತಾಂಬ್ರ ಪಾತ್ರೆ ಮತ್ತು ಅವುಗಳ ರೀಪೇರಿ ವ ಕಲಾಯಿ, ಮಡಿಕೆಗಳು, ಲೋಟಾಗಳು, ಹರಿವಾಣಗಳು, ಸ್ನಾನಮಾಡುವ ಬಗ್ಯೆ ೀಗೆಕಾಯಿ, ಪರಕೆಗಳು, ಗೂಡೆ ಚಾವೆ ಮಾಡಲಿಕ್ಕೆ ಬಿದರು, ಹಗ್ಗ ಮಾಡುವದಕ್ಕೆ ಜುಂಗು, ಖೈದೀರ ಮಕ್ಕಳಿಗೆ ಬೇಕಾದ ಅಕ್ಕಿ, ಹಾಲು, ರೊಪ್ಪಿ, ಸಕ್ಕರೆ ವಗ್ಯೆರೆ ಪದಾರ್ಥಗಳು, ಕುದ್ದಿ ಮೂಡುವಬಗ್ಯೆ ಸುಂಣಾ, ಹೊಗೆ ಹಾಕುವದಕ್ಕೆ ಗಂಧಕ, ಜವಳುಮಣ್ಣು, ಮತ್ತು ಬಟ್ಟೆ ೀವಾಯಿ ಖೈದಿಗಳ ಉಪಯೋಗದ ಬಗ್ಯೆ ಕ್ರಮವಾಗಿ ಕೊಡಬೇಕಾದ ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು. ಕಂಟ್ರಾಕ್ಟುದಾರನು ಖೈದಿಗಳಿಂದ ಬೀಸಲ್ಪಡುವ ಬಗ್ಯೆ ರಾಗಿಯನ್ನು ಸರಬರಾಯಿ ಮಾಡಿ ಬೀದ ಹಿಟ್ಟನ್ನು ಖೈದಿಗಳಿಗೆ ಕೊಡತಕ್ಕದ್ದು.

8. ಸೂಪರ್ಿಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ನುಳಿಸಿಕೊಂಡಿರುತ್ತಾರೆ ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮಂಜೂರಾದ ದರಖಾಸ್ತುದಾರನ ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ಣಮೆಂಟ್ ಪತ್ರಗಳ ಮೂಲಕವಾದರೂ 1,500 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಒಂದು ವಾರದ ಒಳಗಾಗಿ, ಕೊಡಲಿಕ್ಕಾಗಲಿ ತಪ್ಪಿದರೆ, ಸರಕಾರಕ್ಕೆ ಕೇರಿಸಿಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು. ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ಶ್ವರೆಯೊಗಿ ಸೆಂಟ್ರಲ್ ಜೈಲ್ ಸೂಪರ್ಿಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾದಾರನಿಗೆ ಸಾಮಾನುಗಳ ಬಗ್ಯೆ ಒಂದು ಪೋಲಿಯು ಬಿಡಲ್ಪಡುವದು. ಅದರಲ್ಲಿ ಅತನು ನಪ್ಯವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟುಕೊಳ್ಳಬಹುರು. ಮಾಂಸ ವಗ್ಯೆರೇ ನಪ್ಯವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ 8 ಘಂಟೆಗೆ ಜೈಲ್ ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಕಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ, ಸೆಂಟ್ರಲ್ ಜೈಲ್ ಸೂಪರ್ಿಟೆಂಡೆಂಟರವರ ಯಜ್ಞಾಯ್ರೀಯಿಂದ 150 ರೂಪಾಯಿಗೆ ಮೀರದ ಒಂದು ಜುರ್ಮಾನೆಯು ಕಂಟ್ರಾಕ್ಟುದಾರನಿಗೆ ಹಾಕಲ್ಪಡುವದು. ಬಾರ್‌ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಶೇವಣೀ ಮೊಬಲಗು ಸರಕಾರಕ್ಕೆ ಕೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡೆಯುವ ದರೋಬಸ್ತು ಸಂಗತಿಗಳಿಗೊಳಗೂ ಸೆಂಟ್ರಲ್ ಜೈಲ್ ಸೂಪರ್ಿಟೆಂಡೆಂಟರವರ ನಿರ್ಣಯವೇ ಅಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಖೈದಿಗಳ ಉಪಯೋಗಾರ್ಥ ತರಕಾರಿಗಳನ್ನು ದರ ರೂಪಾಯಿ 1ಕ್ಕೆ 40 ಪೌನು ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

16. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ್ ಸೂಪರ್ಿಟೆಂಡೆಂಟರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

17. ಈ ಕಂಟ್ರಾಕ್ಟು, ಮೈಸೂರು ದೇಶದ ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲರವರಿಂದ ಮಂಜೂರ್ಮಾಡಲ್ಪಡುವ ಬಗ್ಯೆ ಬಳಪಟ್ಟಿರತಕ್ಕದ್ದು.

ಷರಾ.—ಮೇಲ್ ಕಂಡ ಕಂಟ್ರಾಕ್ಟಿನಲ್ಲಿ ಯಾವ ವಿಧವಾದ ರಿವ್ಯಾಯತಿಯೂ ತೋರಿಸಲ್ಪಡಲಾರದು.

ಹೊಸ ದೇಶದಲ್ಲಿ ಎಲ್ಲ ತರಗತಿಯ ನೇಯುವ ಶಿಬಿರಗಳಿಗೆ ಸಾಧಾರಣ ಸ್ಕೇಲ್ ಸೆಟ್ಟು.

| ಪದಾರ್ಥಗಳು. | ಎರಡು ವರುಷಗಳಿಗೆ ನೇಯಿಸಬಹುದು ಛಾಲಿ ನೂಲಿನ ಪಂಚೆಗಳಿಗೆ ಸಂಖ್ಯೆ ಮತ್ತು ಅಳತೆ. A ಸ್ಕೇಲ್. | | | | | | | | | | | | ಆರು ತಿಂಗಳಿಗೆ ಮಾತ್ರ ಉಪಯೋಗವಾಗುವ ಛಾಲಿ ನೂಲಿನ ಪಂಚೆಗಳ ಸಂಖ್ಯೆ ಮತ್ತು ಅಳತೆ. B ಸ್ಕೇಲ್. | | | | | | | | | | | | ಆರು ತಿಂಗಳು ಮಾತ್ರ ಉಪಯೋಗವಾಗುವ ಛಾಲಿ ನೂಲಿನ ಪಂಚೆಗಳ ಸಂಖ್ಯೆ ಮತ್ತು ಅಳತೆ. | | | | | | | | | | | | ಸಾಧಾರಣ ಹೊಸಬರು ಮತ್ತು ವಿಶೇಷವಾಗಿ ಅರಿತವರು. | | | | | | | | | | | | ಹುಡುಗ ಶಿಬಿರಗಳು. | | | | | | | | | | | |
|---|---|---

ಯೂರೋಪಿಯರ್ಸ್ ವ ಈಸ್ಟ್ ಇಂಡಿಯರ್ಸ್ ಖೈದಿಗಳ ಆಹಾರದ ಸ್ಕೇಲ್ ಪಟ್ಟಿ.

ಕೂಲಿ ಮಾಡುವ ಖೈದಿಗಳಿಗೆ ಸಾಧಾರಣವಾದ (ಬಿ) ಸ್ಕೇಲ್.

ಪದಾರ್ಥಗಳು.	ಭಾನುವಾರ	ಸೋಮವಾರ	ಮಂಗಳವಾರ	ಬುಧವಾರ	ಗುರುವಾರ	ಶುಕ್ರವಾರ	ಶನಿವಾರ
	ಪೌ.	ಪೌ.	ಪೌ.	ಪೌ.	ಪೌ.	ಪೌ.	ಪೌ.
ರೊಟ್ಟಿ	12	12	12	12	12	12	12
ಮಾಂಸ	8	8	8	8	8	8	8
ಅಕ್ಕಿ	8	8	8	8	8	8	8
ತರಕಾರಿ	10	10	10	10	10	10	10
ಉಪ್ಪು	¾	¾	¾	¾	¾	¾	¾
ಈರುಳ್ಳಿ	½	½	½	½	½	½	½
ಮಸಾಲೆಪುಡಿ	⅜	0	⅜	0	⅜	0	⅜
ಮೆಣಸು	0	⅜	0	⅜	0	⅜	0
ಜೇಳೆ	1	1	1	1	1	1	1
ತುಪ್ಪ	1	1	1	1	1	1	1
ಹುಣಸೇಹಣ್ಣು	½	0	½	0	½	0	½
ನಿಂಬೆಕಾಯಿನವ್ಪಿನಕಾಯಿ	⅛	⅛	⅛	⅛	⅛	⅛	⅛
ಸಕ್ಕರೆ	1	1	1	1	1	1	1
ಕಾಫಿ	1	1	1	1	1	1	1
ಹಾಲು	ರೋಜೀನಾ ½ ಪೈಂಟು.						
ಜಾವೆ	ರೋಜೀನಾ 2 ಔನ್ಸು.						

ಇತರ ಸ್ಕೇಲ್‌ಯಾನೆ ದರಗಳು.

ದೀರ್ಘವಾಯಿದೆಯುಳ್ಳ ಕಠಿಣ ಸಜಾ ಅನುಭವಿಸುವ ಖೈದೀರಿಗೆ ಇದರ ಕೆಳಗೆ ಕಾಣಿಸಿರುವವುಗಳ ವಿನಾ B ಸ್ಕೇಲಿನಂತೆಯೇ ಪೂರಾ A ಸ್ಕೇಲ್

ರೊಟ್ಟಿ	ಪೌ.	16
ಮಾಂಸ	,,	10
ತರಕಾರಿ	,,	12
ತುಪ್ಪ	,,	1½

ಕಾಮಗಾರಿ ಇಲ್ಲದೆ ವ ದರ್ಯಾಫ್ತ್ತಿಯಲ್ಲಿರುವ ಮತ್ತು 7 ದಿವಸಗಳ ಸಜಾ ಮೇಲೆ ಇರುವಂತಾವರಿಗೆ ಇದರ ಕೆಳಗೆ ನಮೂದಿರುವವುಗಳ ವಿನಾ B ಸ್ಕೇಲಿನಂತೆಯೆ.

ರೊಟ್ಟಿ	ಪೌ.	8
ಮಾಂಸ	,,	6
ತರಕಾರಿ	,,	8
ಅಕ್ಕಿ	,,	6

ಬೇಷ್ ಪಥ್ಯ, ರೊಟ್ಟಿ 1 ಪೌ. ನೀರು 2 ಪೈಂಟು.

ಹೆಂಗಸರು: ದೀರ್ಘವಾಯಿದೆವುಳ್ಳ ತಮೋ ಖೈದೀರಿಗೂ—

	ಮಾಂಸ ಕೊಡತಕ್ಕ ದಿವಸಗಳಲ್ಲಿ.		ಇತರ ದಿವಸಗಳಲ್ಲಿ.	
ರೊಟ್ಟಿ	ಪೌ.	12	ಪೌ.	12
ಮಾಂಸ	,,	6	..	6
ತರಕಾರಿ	,,	8	..	8
ಅಕ್ಕಿ	,,	8	..	8
ಜೇಳೆ	,,	1	..	1
ತುಪ್ಪ	,,	1	..	1

ಇತರ ಪದಾರ್ಥಗಳು ಗಂಡಸರಿಗೆ ಕೊಡುವಂತೆಯೇ.

ಮಧ್ಯಮ ಯಾ B ಸ್ಕೇಲ್—ಅಲ್ಪವಾಯಿದೆವುಳ್ಳ ದರ್ಯಾಫ್ತ್ತಿಯಲ್ಲಿರತಕ್ಕ ಯಾ ಕೂಲಿಮಾಡದಂಥಾವರು.

	ಮಾಂಸ ಕೊಡತಕ್ಕ ದಿವಸಗಳಲ್ಲಿ.		ಇತರ ದಿವಸಗಳಲ್ಲಿ.	
ರೊಟ್ಟಿ	ಪೌ.	8	ಪೌ	8
ಮಾಂಸ	,,	4	..	
ತರಕಾರಿ	,,	8	..	
ಅಕ್ಕಿ	,,	6	..	
ಜೇಳೆ	,,	1	..	
ತುಪ್ಪ	,,	1	..	

ಇತರ ಪದಾರ್ಥಗಳು ಮೇಲಿನಂತೆಯೆ.

ನಾಲ್ಕು ಡ್ರಾಂಗಳ ವುಪ್ಪು ಪುಡಿಮಾಡಿ ಕೊಡತಕ್ಕದ್ದು, ಅದು ಆಹಾರದೊಡನೆ ಬೆರಸಿಕೊಂಡು ತಿನ್ನತಕ್ಕದ್ದು.

ತರಕಾರಿ ವೈಕಿ ಅರ್ಧ ಭಾಗ ಉರಳಗಡ್ಡೆಯಾಗಿರಬೇಕು.

ಕಾಫಿಯು 1 ಪೈಂಟು ನೀರಿನಲ್ಲಿ ಮಾಡತಕ್ಕದ್ದು.

ಹೊತ್ತು ಹೋಗಿ ಬಂದವರು (4 ಔ. ರವೆ 2 ಔ. ಸಕ್ಕರೆವುಳ್ಳ) 1 ಪೈಂಟು ರವೆ ಗಂಜಿಯಾಗಲಿ (½ ಪೌ) ಸಾರು ಅನ್ನವಾಗಲಿ ಪಡೆಯತಕ್ಕದ್ದು

ಆರೋಗ್ಯವಿಷಯಕ್ಕಾಗಿ ವಿನಾ ಅನ್ಯಥಾ ಪೂರಾ (ಎ) ಸ್ಕೇಲ್‌ದರದಂತೆ ಕೊಡಲ್ಪಡಕೂಡದು.

ಹೆಚ್. ಹೆಚ್. ಸ್ಪಾರ್ಕ್ಸ್,
ಸೂಪರ್‌ಟೆಂಡೆಂಟ್